# ನಗರಸಭಾ ಕಾರ್ಯಾಲಯ, ರಾಮನಗರ

ನಂ: ಸಾಮಾನ್ಯ ಸಭೆ/2/2006-07 ದಿನಾಂಕ: 15-04-06

ದಿನಾಂಕ: 15-04-2006 ರ ಶನಿವಾರ ಮದ್ಯಾಹ್ನ 2.30 ಗಂಟೆಗೆ ನಗರಸಭೆ ಪ್ರಶಸ್ತಿ ಭವನದಲ್ಲಿ ಶ್ರೀ. ಸೈಯದ್ ಖಿಜರ್‌ಪಾಷ , ಅಧ್ಯಕ್ಷರು , ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ನಡೆದ 2006-07 ನೇ ಸಾಲಿನ ಆಯ-ವ್ಯಯ ವಿಶೇಷ ಸಾಮಾನ್ಯ ಸಭೆಯ ನಡವಳಿಗಳು:

ಹಾಜರಿ : 17 ಗೈರುಹಾಜರಿ : 15 ಖಾಲಿ : 1 ಒಟ್ಟು : 33

ವಿಷಯ 27:- 2006-07 ನೇ ಸಾಲಿನ ಆಯ-ವ್ಯಯ ಹಾಗೂ 2005-06 ನೇ ಸಾಲಿನ ಪರಿಷ್ಕೃತ ಅಂದಾಜುನ್ನು ಒಪ್ಪಿ ಅನುಮೋದಿಸುವ ವಿಚಾರ.

ತೀರ್ಮಾನ 27:-ಸಭೆ ಪ್ರಾರಂಭಕ್ಕೆ ಪೌರಾಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಉಪಾಧ್ಯಕ್ಷರು, ಮತ್ತು ಸದಸ್ಯರುಗಳನ್ನು ಹಾಗೂ ಪತ್ರಕರ್ತರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿ ಯಶಸ್ವಿಗೊಳಿಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.

ಅಧ್ಯಕ್ಷರು ಮಾತನಾಡಿ ಈ ಬಾರಿ 2006-07ನೇ ಸಾಲಿಗೆ ಯಾವುದೇ ಹೊಸ ತೆರಿಗೆ ವಿಧಿಸದೆ ವಿಶಿಷ್ಟವಾಗಿ ಆಯ-ವ್ಯಯವನ್ನು ತಯಾರಿಸಲಾಗಿದೆ ಎಂದು ತಿಳಿಸಿ ಸಭೆಗೆ ವಿವರಿಸಿದರು.

ನಂತರ ಮಾತನಾಡಿ 2006-07 ನೇ ಸಾಲಿನ ಆಯ-ವ್ಯಯದಲ್ಲಿ ಸರ್ಕಾರವು ರಾಮನಗರದ ಅಭಿವೃದ್ಧಿಗೆ ರೂ. 3.00 ಕೋಟಿ ಬಿಡುಗಡೆ ಮಾಡಿರುವುದನ್ನು ಸೇರಿಸಿಕೊಂಡಿದ್ದು ಈ ಸಂಧರ್ಭದಲ್ಲಿ ಘನ ಸರ್ಕಾರವನ್ನು ತುಂಬು ಹೃದಯದಿಂದ ಶ್ಲಾಘೀಸಿ ಸರ್ಕಾರಕ್ಕೆ ಮಾನ್ಯ ಸದಸ್ಯರ ಹಾಗೂ ನಗರದ ಜನತೆಯ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದನೆ ಸಲ್ಲಿಸಿದರು. ನಂತರ 2005-06ನೇ ಸಾಲಿನ ಪರಿಷ್ಕೃತ ಅಂದಾಜನ್ನು ಮತ್ತು 2006-07 ನೇ ಸಾಲಿನ ಆಯ-ವ್ಯಯವನ್ನು ಸಭೆಗೆ ಮಂಡಿಸಿದರು.

ಸಭೆಯು ಸುಧೀರ್ಘವಾಗಿ ಚರ್ಚಿಸಿತು. ನಂತರ ಸದಸ್ಯರುಗಳಾದ ಶ್ರೀ ನಾಗಣ್ಣನವರು, ಶ್ರೀ. ಭಾಸ್ಕರ್‌ರವರು ಮತ್ತು ಶೇಷಾದ್ರಿರವರು ಮಾತನಾಡಿ ಈ ಬಾರಿ ಸರ್ಕಾರವು ರೂ. 3.00 ಕೋಟಿಗಳನ್ನು ರಾಮನಗರ ಅಭಿವೃದ್ಧಿಗೆ ನೀಡಿರುವುದನ್ನು ಅಭಿನಂದಿಸಿ ಈ ಸಾಲಿನ ಆಯ-ವ್ಯಯ ವಿಶಿಷ್ಟವಾಗಿದ್ದು ನಗರದ ಪ್ರಮುಖ ವೃತ್ತಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಕ್ಕಾಗಿ ದುಡಿದ ಮಹನೀಯರ ಪ್ರತಿಮೆ ಅನಾವರಣಗೊಳಿಸುವುದು ಸ್ಥಳೀಯ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಮತ್ತು ಮಹಿಳಾ ಸಂಘ ಸಂಸ್ಥೆಗಳಿಗೆ ಉತ್ತೇಜನ ನೀಡಲು ಹಣವನ್ನು ಕಾದಿರಿಸಿಕೊಂಡಿರುವುದಕ್ಕೆ ಶ್ಲಾಘೀಸಿದರು ನಂತರ ಸಭೆಯು ಸರ್ವಾನುಮತದಿಂದ 2005-06 ನೇ ಸಾಲಿನ ಪರಿಷ್ಕೃತ ಅಂದಾಜು (ಪುನರ್ ವಿಮರ್ಶಿತ) ನ್ನು ಮತ್ತು ಈ ಕೆಳಕಂಡಂತೆ 2006-07 ನೇ ಸಾಲಿನ ಆಯ-ವ್ಯಯವನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಮಂಜೂರು ಮಾಡಿತು.

| ವಿವರ | 2005-06 ನೇ ಸಾಲಿನ ಪರಿಷ್ಕೃತ ಅಂದಾಜು (ಪುನರ್ ವಿಮರ್ಶಿತ) | 2006-07 ನೇ ಸಾಲಿನ ಆಯ-ವ್ಯಯ |
|---|---|---|
| ಆರಂಭದ ಶಿಲ್ಕು | 95,25,932 | 14,98,613 |
| ಜಮೆಗಳು | 3,46,59,649 | 8,35,63,000 |
| ಒಟ್ಟು | 4,41,85,581 | 8,50,61,613 |
| ಖರ್ಚುಗಳು | 2,91,60,320 | 8,30,20,000 |
| ಅಖೈರು ಶುಲ್ಕ | 1,50,25,261 | 20,41,613 |

-ಸಹಿ-

ಅಧ್ಯಕ್ಷರು
ನಗರಸಭೆ, ರಾಮನಗರ.

" ನಕಲು"

PDF Created with deskPDF PDF Writer - Trial :: http://www.docudesk.com

# ನಗರಸಭಾ ಕಾರ್ಯಾಲಯ, ರಾಮನಗರ

ಸಂ:ಸಾಮಾನ್ಯಸಭೆ/01/2006-07 ದಿ: 15.04.2006

ದಿ: 15.04.2006 ರ ಶನಿವಾರ ಬೆಳ್ಳಿಗ್ಗೆ 11.00 ಘಂಟೆಗೆ ನಗರಸಭೆಯ ಪ್ರಶಸ್ತಿ ಭವನದಲ್ಲಿ ಶ್ರೀ.ಸೈಯದ್ ಖಿಜರ್ ಪಾಷ, ಅಧ್ಯಕ್ಷರು ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಿ : 17 ಗೈರುಹಾಜರಿ : 15 ಖಾಲಿ : 1 ಒಟ್ಟು : 33

೨ ೨ ೨ ೨ ೨ ೨ ೨ ೨ ೨

ಸಭೆ ಪ್ರಾರಂಭಕ್ಕೆ ಪೌರಾಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ಸದಸ್ಯರುಗಳನ್ನು ಹಾಗೂ ಪತ್ರಕರ್ತರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿ ಯಶಸ್ವಿಗೊಳಿಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ದಿನಾಂಕ: 12-04-2006 ರಂದು ದೈವಾಧೀನರಾದ ಡಾ|| ರಾಜ್‌ಕುಮಾರ್ ರವರ ಆತ್ಮಕ್ಕೆ ಶಾಂತಿಕೋರಿ ಮೌನ ಆಚರಿಸಲು ಸಂತಾಪ ಸೂಚಕ ನಿರ್ಣಯವನ್ನು ಸಭೆಗೆ ಮಂಡಿಸಿದರು. ಸದಸ್ಯರುಗಳಾದ ಶ್ರೀ ನಾಗಣ್ಣನವರು, ಶ್ರೀ ಎ.ವಿ.ಬಾಸ್ಕರ್‌ರವರು ಶ್ರೀ ಉಮೇಶ್‌ರವರು, ಶ್ರೀ ಕೃಷ್ಣಪ್ಪ, ಶ್ರೀ ಶೇಷಾದ್ರಿರವರು ಮತ್ತು ಶ್ರೀಮತಿ. ವನಮಾಲರೆಡ್ಡಿರವರು ಮಾತನಾಡಿ ಶ್ರೀ ಡಾ|| ರಾಜ್‌ಕುಮಾರ್‌ರವರು ಜೀವಿತ ಅವಧಿಯಲ್ಲಿ ಸಾಧಿಸಿರುವ ಏಳಿಗೆ ಬಗ್ಗೆ ಶ್ಲಾಘಿಸಿ ಅವರ ನೆನಪು ಅಜರಾಮರವಾಗಿ ಉಳಿಯಲಿ ಎಂದು ಕನ್ನಡಕ್ಕಾಗಿ ಹೋರಾಡಿ ಕರ್ನಾಟಕದಲ್ಲಿ ಕನ್ನಡ ನೆಲಸುವಂತೆ ಹೋರಾಡಿದ, ಮೇರುನಟ ಬಿರುದನ್ನು ಪಡೆದು ಹಲವು ಪ್ರಶಸ್ತಿಗಳನ್ನು ಗಳಿಸಿರುವುದು ಅವರ ಮುಗ್ದತೆ, ನಿಷ್ಟೆಯನ್ನು ಎತ್ತಿ ತೋರಿಸುತ್ತದೆ ಅಲ್ಲದೇ ಅವರ ಪ್ರತಿಯೊಂದು ಚಿತ್ರವು ಕೂಡ ಸಮಾಜಕ್ಕೆ ನೀತಿ ಪಾಠವನ್ನು ಹೇಳುವ ಚಿತ್ರಗಳಾಗಿರುತ್ತವೆ. ಕನ್ನಡ ಚಲನ ಚಿತ್ರೋದ್ಯಮದಲ್ಲಿ ಎಲ್ಲರ ಮನಸ್ಸನ್ನು ಗೆದ್ದ ಏಕೈಕ ವ್ಯಕ್ತಿ ಎಂದರೆ ಡಾ|| ರಾಜ್‌ಕುಮಾರ್ ಎಂಬುದಾಗಿ ಶ್ಲಾಘಿಸಿದರು. ನಗರಸಭೆಯು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಶ್ರೀಯುತರು ಪಾಲ್ಗೊಂಡು ಹಲವು ಕೆಲಸಗಳನ್ನು ಮಾಡಲು ಸಹಕಾರಿಯಾಗಿದ್ದಾರೆಂದು ಅವರ ಹೆಸರು ನೆನಪಾಗಿ ಉಳಿಯಲು ನಗರದಲ್ಲಿ ಒಂದು ರಸ್ತೆಗೆ ಮೇರುನಟರ ಹೆಸರನ್ನು ಇಡಬೇಕೆಂದು ಐ.ಡಿ.ಎಸ್.ಎಂ.ಟಿ ಕಾಂಪ್ಲೆಕ್ಸ್‌ಗೆ ಅವರ ಹೆಸರನ್ನು ಇಡಲು ಕೋರಿದರು. ಸದರಿಯವರ ಆತ್ಮಕ್ಕೆ ಭಗವಂತನು ಶಾಂತಿ ನೀಡಲೆಂದು ಅವರ ಕುಟುಂಬದ ವರ್ಗದವರಿಗೆ ಅವರ ನಿಧನದಿಂದ ಆಗಿರುವ ದು:ಖವನ್ನು ತಡೆಯುವ ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಲಾಯಿತು. ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು.

ಪೌರಾಯುಕ್ತರು ಮಾತನಾಡಿ ಹಳ್ಳಿಯಲ್ಲಿ ಹುಟ್ಟಿ ರಾಷ್ಟ್ರಮಟ್ಟಕ್ಕೆ ಬೆಳೆದ ಪುಣ್ಯಪುರುಷ ಹಾಗು ಸಾರ್ವಭೌಮ ಡಾ|| ರಾಜ್‌ಕುಮಾರ್ ಆಗಿ ಬೃಹಧಾಕಾರವಾಗಿ ಬೆಳೆದ ಶಕ್ತಿ ಎಂದು ಶ್ಲಾಘಿಸಿ ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಹಾಗು ಅವರ ಕುಟುಂಬದವರಿಗೆ ದು:ಖ ತಡೆಯುವ ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಲಾಯಿತು.

ಅಧ್ಯಕ್ಷರು ಮಾತನಾಡಿ ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಗರದಲ್ಲಿ ಆಸ್ಪತ್ರೆ ತೆಗೆಯುವುದು ಸೂಕ್ತವೆಂದು ಸಭೆಯಲ್ಲಿ ವಿನಂತಿಸಿದರು. ನಂತರ ಅವರ ಆತ್ಮಕ್ಕೆ ಶಾಂತಿ ನೀಡಲೆಂದು ಹಾಗು ಅವರ ಕುಟುಂಬ ವರ್ಗಕ್ಕೆ ದು:ಖ ಭರಿಸುವ ಶಕ್ತಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸಿ ಎರಡು ನಿಮಿಷ ಮೌನ ಆಚರಿಸಲಾಯ್ತು.

ವಿಷಯ 1:- ದಿ: 21-01-2006 ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳು ಹಾಗು ದಿ: 20.02.2006 ಮತ್ತು 03.03.2006 ರಂದು ನಡೆದ ವಿಶೇಷ ಸಭೆಯ ನಡವಳಿಗಳನ್ನು ಓದಿ ರಿಕಾರ್ಡ್ ಮಾಡುವ ವಿಚಾರ.

ತಿರ್ಮಾನ 1:-ಸಭೆಯು ದಿ: 21-01-2006ರ ಸಭೆ ನಡೆವಳಿಯನ್ನು ಕೆಳಕಂಡ ತಿದ್ದುಪಡಿಯೊಡನೆ ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು.

PDF Created with deskPDF PDF Writer - Trial :: http://www.docudesk.com

ದಿನಾಂಕ; 21-01-2006ರ ನಿರ್ಣಯ 73ರಲ್ಲಿ ಕೆ.ಯು.ಡಬ್ಲ್ಯೂ.ಎಸ್ ಮತ್ತು ಡಿ.ಬಿ. ರವರು ನಗರದ ಜನತೆಗೆ ನೀರಿನ ವಿತರಣೆಯಲ್ಲಿ ಯಾವುದೇ ಲೋಪ ಎಸಗುವುದಿಲ್ಲವೆಂದು ಹಾಲಿ ನಗರದಲ್ಲಿ ಇರುವ ನಿಲ್ಲಿಸಿರುವ ಬೋರ್‌ವೆಲ್‌ಗಳಿಂದ ನೀರು ಸರಬರಾಜು ಮಾಡುವುದಾಗಿ ಕೆಟ್ಟಿರುವ ಬೋರ್‌ವೆಲ್‌ಗಳನ್ನು ತಕ್ಷಣ ದುರಸ್ಥಿ ಮಾಡಿಸಿ ನೀರು ಸರಬರಾಜನ್ನು ತೃಪ್ತಿಕರವಾಗಿ ವಿತರಣೆಮಾಡಲಾಗುವುದೆಂದು ಸಭೆಯಲ್ಲಿ ಒಪ್ಪಿಕೊಂಡವರು ಸಭೆಯಲ್ಲಿ ಒಪ್ಪಿಕೊಂಡತೆ ಯಾವುದೇ ವ್ಯವಸ್ಥೆಯನ್ನು ಮಾಡಿರುವುದಿಲ್ಲ ಈಗ ಬೇಸಿಗೆ ಕಾಲವಾಗಿದ್ದು ನಾಗರೀಕರು ವಾರಗಟ್ಟಲೆ ನೀರಿಲ್ಲದೆ ಪರಿತಪಿಸುವಂತಾಗಿದೆ. ಅಧ್ಯಕ್ಷರು ಮತ್ತು ಪೌರಾಯುಕ್ತರು ಬೋರ್ಡಿನ ಇಂಜಿನೀಯರ್‌ಗಳ ಜೊತೆ ಮಾತನಾಡಿ ಸಭೆಯಲ್ಲಿ ಒಪ್ಪಿಕೊಂಡಿರುವ ರೀತಿ ನಾಗರೀಕರಿಗೆ ನೀರು ಸರಬರಾಜು ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕೆಂದು ಶ್ರೀ. ಶೇಷಾದ್ರಿಯವರು ಸಭೆಯಲ್ಲಿ ಕೋರಿದರು. ಶ್ರೀ ಉಮೇಶ್‌ರವರು ಮಾತನಾಡಿ ಯಾವುದೇ ಬೋರ್‌ವೆಲ್‌ಗಳಿಂದ ನೀರು ಸರಬರಾಜು ಮಾಡುತ್ತಿಲ್ಲ ಕೆಟ್ಟಿರುವ ಬೋರ್‌ವೆಲ್‌ಗಳನ್ನು ದುರಸ್ಥಿಪಡಿಸಿಲ್ಲವೆಂದು ದೂರಿದರು. ಎಲ್ಲ ಸದಸ್ಯರುಗಳು ಕೆ.ಯು.ಡಬ್ಲ್ಯೂ.ಎಸ್ ಮತ್ತು ಡಿ.ಬಿ. ಇಂಜಿನೀಯರ್‌ಗಳ ಬಗ್ಗೆ ತುಂಬಾ ಅಸಮಾದಾನ ವ್ಯಕ್ತಪಡಿಸಿದರು ಶ್ರೀ ನಾಗಣ್ಣನವರು ಮಾತನಾಡಿ ಕೆ.ಯು.ಡಬ್ಲ್ಯೂ.ಎಸ್ ಮತ್ತು ಡಿ.ಬಿ. ಇಂಜಿನೀಯರ್‌ಗಳು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುತ್ತಿಲ್ಲ ಅಂತಹವರನ್ನು ಗುರುತಿಸಿ ಅಂತವರ ಮೇಲೆ ಉಗ್ರ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ವರದಿಸಲ್ಲಿಸಿದ್ದಲ್ಲಿ ನಂತರ ಬರುವ ಇಂಜಿನೀಯರ್‌ಗಳು ನೀರಿನ ವ್ಯವಸ್ಥೆ ತೃಪ್ತಿಕರವಾಗಿ ಮಾಡುತ್ತಾರೆಂದು ಈ ಬಗ್ಗೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಅಧಿಕಾರ ನೀಡುವುದೆಂದು ತಿಳಿಸಿದರು. ಅಗತ್ಯ ಬಿದ್ದಲ್ಲಿ ಕೆ.ಯು.ಡಬ್ಲ್ಯೂ.ಎಸ್ ಮತ್ತು ಡಿ.ಬಿ. ರವರಿಗೆ ನೀಡಿರುವ ನೀರು ಸರಬರಾಜು ವಿತರಣಾ ವ್ಯವಸ್ಥೆಯನ್ನು ನಗರಸಭೆ ವಹಿಸಿಕೊಳ್ಳಲು ಸರ್ಕಾರಕ್ಕೆ ಪತ್ರ ಬರೆಯಲು ಸೂಕ್ತವೆಂದು ತಿಳಿಸಿದರು ಹಾಗೂ ನಗರದ ಸುತ್ತ ಇರುವ ನೀರಿನ ಲಭ್ಯ ಪ್ರಮಾಣವನ್ನು ಗಮನಿಸಿದಾಗ ನಗರಕ್ಕೆ ದಿನದಲ್ಲಿ ಎರಡು ಬಾರಿ ನೀರನ್ನು ಕೊಡಬಹುದೆಂದು ತಿಳಿಸಿದರು.

ಶ್ರೀ ಎ.ವಿ.ಬಾಸ್ಕರ್‌ರವರು ಮಾತನಾಡಿ ಹಿಂದಿನ ಇವರ ಲೋಪಗಳನ್ನೆಲ್ಲ ರೆಕಾರ್ಡ್ ಮಾಡಿ ವಿಶೇಷ ಸಭೆಯಲ್ಲಿ ನಿರ್ಣಯ ಕೈಗೊಂಡು ನಗರಸಭೆಗೆ ನೀರು ಸರಬರಾಜು ವ್ಯವಸ್ಥೆಯನ್ನು ವಹಿಸಿಕೊಳ್ಳುವುದು ಸೂಕ್ತವೆಂದು ಸಭೆಗೆ ತಿಳಿಸಿದರು. ಸಭೆಯು ಮೇಲ್ಕಂಡ ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ಸರ್ವಾನುಮತದಿಂದ ಒಪ್ಪಿ ಈ ಬಗ್ಗೆ ಸೂಕ್ತ ನೀರಿನ ವ್ಯವಸ್ಥೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ. ಮತ್ತು ಒ.ಚ. ರವರಿಗೆ ಪತ್ರ ಬರೆಯುವಂತೆಯೂ ಅವರಿಂದ ಯಾವುದೇ ಕ್ರಮ ಜರುಗಿಸದೇ ಇದ್ದಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಮತ್ತೆ ನಗರಸಭೆಗೆ ವಹಿಸಿಕೊಳ್ಳಲು ಸರ್ಕಾರಕ್ಕೆ ಮನವಿ ಮಾಡುವಂತೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ತಿರ್ಮಾನ 75.ರ ಬಗ್ಗೆ ಶ್ರೀ ಶೇಷಾದ್ರಿಯವರು ಮಾತನಾಡಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ಪೌರಾಯುಕ್ತರನ್ನು ವಿವರಣೆ ಕೇಳಿದರು ಪೌರಾಯುಕ್ತರು ಮಾತನಾಡಿ ಈ ಸಂಬಂಧ ತಹಸೀಲ್ದಾರ್‌ರವರಿಗೆ ಪತ್ರಬರೆಯಲಾಗಿದೆ ಸದರಿಯವರು ಈವರೆಗೆ ಸ್ಪಂದಿಸಿರುವುದಿಲ್ಲ. ತಕ್ಷಣವೇ ನೇನಪೋಲೆಯನ್ನು ಬರೆದು ಜಿಲ್ಲಾಧಿಕಾರಿರವರಿಗೆ ಪೂರ್ಣ ವಿವರ ಗಳನ್ನೊಳಗೊಂಡಂತೆ ಪತ್ರವನ್ನು ಬರೆಯುವುದಾಗಿ ತಿಳಿಸಿದರು.

ಶ್ರೀ.ನಾಗಣ್ಣನವರು ಇಂದು ನಗರಸಭಾ ವ್ಯಾಪ್ತಿಯಲ್ಲಿರುವ ರೆವಿನ್ಯೂ ಆಸ್ತಿಗಳನ್ನು ನಗರಸಭೆಯು ಪಡೆದು ಸಂರಕ್ಷಿಸಿದಲ್ಲಿ ಮುಂದಿನ ಪೀಳಿಗೆಗೆ ತುಂಬಾ ಅನುಕೂಲ ಮಾಡಿದಂತಾಗುತ್ತದೆಂದು ತಿಳಿಸಿ ನಾವೇ ಮುಂದುವರೆದು ನಗರಸಭೆ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ಆಸ್ತಿಗಳನ್ನು ಪಡೆಯಲು ಮುಂದಾಗಬೇಕೆಂದು ತಿಳಿಸಿದರು ನಂತರ ಸಭೆಯು ಮೇಲಿನ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನು ಒಪ್ಪಿ ತೀರ್ಮಾನಿಸಿತು. ದಿ : 03-03-2006 ರಂದು ನಡೆದ ವಿಶೇಷ ಸಭೆಯ ನಡವಳಿಕೆ ಸಂಖ್ಯೆ 106 ರ ಬಗ್ಗೆ ಅಧ್ಯಕ್ಷರು ಮಾತನಾಡಿ, ನಗರಸಭೆಯಿಂದ ಹರಾಜು ಮಾಡಿರುವ ಮರಗಳನ್ನು ಪಡೆದಿರುವ ಹರಾಜುದಾರರು ಈಗಾಗಲೇ ಮನವಿ ಮಾಡಿ ತಮಗೆ ಮರದ ಹರಾಜನ್ನು ಸ್ಥಿರಿಕರಿಸಲು ಮನವಿ ಮಾಡಿದ್ದನ್ನು ಒಪ್ಪಬಹುದೆಂದು ಸಭೆಗೆ ವಿವರ ನೀಡಿದ್ದರ ಮೇರೆ ಹರಾಜನ್ನು ಖಾಯಂ ಮಾಡಲು ಸಭೆಯು ತಿರ್ಮಾನಿಸಿತು.

PDF Created with deskPDF PDF Writer - Trial :: http://www.docudesk.com

ವಿಷಯ 2:- ಜನವರಿ-2006 ಮತ್ತು ಫೆಬ್ರವರಿ-2006 ಮಾಹೆಗಳ ಜನನ - ಮರಣ ತ:ಖ್ತೆಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

| | ಜನನ | | | ಮರಣ | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಆನವರಿ-2006 | 110 | 125 | 235 | 25 | 7 | 32 |
| ಫೆಬ್ರವರಿ-2006 | 99 | 87 | 186 | 24 | 12 | 36 |
| ಮಾರ್ಚಿ-2006 | | | | | | |

ತಿರ್ಮಾನ 2:- ಜನವರಿ-2006 ರಿಂದ ಮಾರ್ಚಿ-2006 ವರೆಗಿನ ಜನನ ಮತ್ತು ಮರಣ ತ:ಖ್ತೆಯನ್ನು ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ 3:- ಜನವರಿ-06 ರಿಂದ ಮಾರ್ಚಿ-06 ರ ಮಾಹೆವರೆಗಿನ ಜಮಾ ಮತ್ತು ಖರ್ಚನ್ನು ಓದಿ ಅಂಗೀಕರಿಸುವ ವಿಚಾರ. ( ಪು.ಸಂ: .................. ರಿಂದ ..................... ರವರೆಗೆ)

ತಿರ್ಮಾನ 3:- ಜನವರಿ 2006 ರಿಂದ ಮಾರ್ಚ 2006ವರೆಗಿನ ಜಮಾ ಮತ್ತು ಖರ್ಚಿನ ತ:ಖ್ತೆಯನ್ನು ಓದಿ ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಿಷಯ 4:- ಸರ್ಕಾರಿ ಸುತ್ತೋಲೆ ಮತ್ತು ಪ್ರಪತ್ರಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತಿರ್ಮಾನ 4:- ಸರ್ಕಾರದ ಸುತ್ತೋಲೆ ಮತ್ತು ಪ್ರಪತ್ರಗಳನ್ನು ಸಭೆ ಗಮನಕ್ಕೆ ತಂದು ರೇಕಾರ್ಡ್ ಮಾಡಲಾಯಿತು.

ವಿಷಯ 5:- ಕಸವಿಲೇವಾರಿ ಹೊಸ ನಿಯಮದ ಪ್ರಕಾರ ಪ್ಯಾಕೆಜ್ ಸಿಸ್ಟಂ ರೀತ್ಯಾ ರೂಪಿಸಿ ಸರ್ಕಾರದ ಮಂಜೂರಾತಿ ಪಡೆದಿದ್ದು ಟೆಂಡರ್ ಕರೆದು ಜಾರಿಗೊಳಿಸಬೇಕಾಗಿರುವುದರಿಂದ ಜಾರಿಗೊಳಿಸುವರೆಗೆ ಹಾಲಿ ಇರುವ ಗುತ್ತಿಗೆ ಅವಧಿಯನ್ನು ಅದೇ ದರದಲ್ಲಿ ಮುಂದುವರೆಸುವ ವಿಚಾರ.
(ಹಾಲಿ ಟೆಂಡರ್ ಮೇ-06 ಕ್ಕೆ ಮುಕ್ತಾಯವಾಗುತ್ತದೆ)

ತಿರ್ಮಾನ 5:- ಹಾಲಿ ಅನುಮೋದಿಸಿರುವ ಟೆಂಡರ್ ಮೇ-2006 ರ ವರೆಗೆ ಇರುವುದರಿಂದ ಆ ಟೆಂಡರ್‌ನ್ನೆ ಮುಂದುವರೆಸುವುದೆಂದು ಅಗತ್ಯವಿದ್ದಲ್ಲಿ ಕಸ ವಿಲೇವಾರಿಗೆ ಹೊಸ ನಿಯಮಾವಳಿ ಪ್ರಕಾರ ಪ್ಯಾಕೇಜ್ ಸಿಸ್ಟಂ ರೀತ್ಯಾ ಟೆಂಡರ್ ಕರೆದು ಕೆಲಸ ಆದೇಶ ನೀಡುವವರೆಗೆ ಮುಂದುವರೆಸುವುದೆಂದು ಈ ಕಾರ್ಯವನ್ನು ಇನ್ನೇರಡು ತಿಂಗಳೊಳಗೆ ಪೂರ್ಣಗೊಳಿಸಲು ಸೂಚಿಸಿ ಸಭೆಯು ಸರ್ವಾನುಮತದಿಂದ ತೀಮಾನಿಸಿತು.

ವಿಷಯ 6:- ಐ.ಡಿ.ಎಸ್.ಎಂ.ಟಿ. ವಾಣಿಜ್ಯ ಸಂಕೀರ್ಣದ ಸೆಕ್ಯೂರಿಟಿ ಸರ್ವೀಸಸ್ ರವರ ಅವಧಿಯು 31.03.2006 ಕ್ಕೆ ಮುಕ್ತಾಯವಾಗಿದ್ದು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವವರೆಗೆ ಅದೇ ದರದಲ್ಲಿ ಮುಂದುವರೆಸಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತಿರ್ಮಾನ 6:- ಹೊಸದಾಗಿ ಕರೆದಿರುವ ಟೆಂಡರ್ ಅನುಮೋದನೆಗಾಗಿ ಆದೇಶ ನೀಡುವವರೆಗೆ ಅದೇ ದರದಲ್ಲಿ ಒಲಂಪಿಕ್ ಸೆಕ್ಯೂರೆಟಿ ಸರ್ವೀಸ್‌ರವರ ಸೇವೆಯನ್ನೇ ಮುಂದುವರೆಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

PDF Created with deskPDF PDF Writer - Trial :: http://www.docudesk.com

ವಿಷಯ 7:- ಐ.ಡಿ.ಎಸ್.ಎಂ.ಟಿ. ವಾಣಿಜ್ಯ ಸಂಕೀರ್ಣಕ್ಕೆ ಬದ್ರತೆಗಾಗಿ ಕರೆದಿರುವ ಟೆಂಡರ್‌ಗಳನ್ನು ಅಂಗೀಕರಿಸುವ ವಿಚಾರ.

ತಿರ್ಮಾನ 7:- ಸಭೆಯಲ್ಲಿ 2006-07 ನೇ ಸಾಲಿಗೆ ಐ.ಡಿ.ಎಸ್.ಎಂ.ಟಿ ವಾಣಿಜ್ಯ ಸಂಕೀರ್ಣ ಕಾವಲಿಗಾಗಿ ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಯಿತು. ನಂತರ ಕಡಿಮೆ ಟೆಂಡರ್‌ದಾರರಾದ ಒಲಂಪಿಕ್ ಸೆಕ್ಯೂರೆಟಿ ಸರ್ವೀಸ್‌ರವರು ಮಾಸಿಕ ರೂ. 6200/- ಗಳಿಗೆ ಇತರೆ ಟೆಂಡರ್‌ದಾರರಿಗಿಂತ ಕಡಿಮೆ ದರ ನಮೂದಿಸಿರುವುದರಿಂದ ಇವರ ಟೆಂಡರ್‌ನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.

ವಿಷಯ 8:- ನಗರಸಭಾ ವ್ಯಾಪ್ತಿಯಲ್ಲಿ ಬರುವ ಪುಟ್ ಭಾತ್ ಹಾಗೂ ರಸ್ತೆ ಬದಿಯಲ್ಲಿ ಮಾರಾಟ ಮಾಡುವ ವಸ್ತುಗಳಿಗೆ (ದಿನವಹಿ ಮಾರುಕಟ್ಟೆ) ಸುಂಕ ವಸೂಲಿ ಮಾಡಲು ಕರೆದಿರುವ ಟೆಂಡರ್ ಕಂ ಬಹಿರಂಗ ಹರಾಜನ್ನು ಅಂಗೀಕರಿಸುವ ವಿಚಾರ.

ತಿರ್ಮಾನ 8:- 2006-07 ನೇ ಸಾಲಿಗೆ ಮಾಸಿಕ ರೂ. 17,111/- ಗಳಿಗೆ ಶ್ರೀ ಮಹದೇವ ಬಿನ್ ಮಾರಣ್ಣ, ವಿದ್ಯಾನಗರ ರವರಿಗೆ ನಿಂತಿರುವ ದಿನವಹಿ ಸುಂಕ ವಸೂಲಿ ಹಕ್ಕನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ದಿ:01-04-2007 ರಿಂದ ಜಾರಿಗೆ ನೀಡಿರುವುದನ್ನು ಅನುಸಮರ್ಥನಗೊಳಿಸಲಾಯಿತು.

ವಿಷಯ 9:- ವಿಶೇಷ ಭೂಸ್ವಾದೀನ ಅಧಿಕಾರಿಗಳ ಕಛೇರಿ ಪತ್ರದ ಸಂಖ್ಯೆ ಎಲ್.ಎ.ಸಿ/ಆರ್.ಹೆಚ್.ಎಸ್/216/84-85, ದಿ:28.02.2006 ಪತ್ರದಂತೆ ಐಜೂರು ಗ್ರಾಮಾದ ಸರ್ವೆ ನಂ.4 ರಲ್ಲಿ 7 ಎಕರೆ 3 ಗುಂಟೆ ಜಮೀನನ್ನು ನಿವೇಶನ ಹಂಚಲು ಭೂಸ್ವಾದೀನ ಪಡಿಸಿಕೊಂಡಿದ್ದು ನ್ಯಾಯಾಲಯದ ಆದೇಶದಂತೆ ಹೆಚ್ಚುವರಿ ಪರಿಹಾರ ಹಣವನ್ನು ಪಾವತಿಸಲು ಕೋರಿರುವ ಪತ್ರದ ವಿಚಾರ.

ತಿರ್ಮಾನ 9:- ಮತ್ತು 24 ವಿಷಯದ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿತು, ಹಿಂದಿನ ಸಭೆ ಠರಾವು 75ರಲ್ಲಿ ಭೂಸ್ವಾಧೀನ ಬಾಬ್ತು ರೂ. 15,63,961/- ಗಳನ್ನು ಸೇರಿ ಒಟ್ಟು 36.00 ಲಕ್ಷ ರೂ. ಗಳನ್ನು ಜಮೀನಿನ ಭೂಸ್ವಾಧೀನ ಹೆಚ್ಚುವರಿ ಪರಿಹಾರ ಹಣ ಪಾವತಿಸಬೇಕಾಗಿದ್ದು, ನ್ಯಾಯಾಲಯದಿಂದ ಅರ್ಜಿದಾರರು ಅಟಾಚ್‌ಮೆಂಟ್ ತರುವ ಸಂಭವವಿರುವುದರಿಂದ ಭೂಸ್ವಾಧೀನ ಅಧಿಕಾರಿಗಳು ನೆನಪೋಲೆಗಳನ್ನು ಕಳುಸುತ್ತಿರುವುದರಿಂದ ಜರುರಾಗಿ ಜಮಾ ಮಾಡಬೇಕಾಗಿದ್ದು ಈಗೀನ ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದೇ ಇದ್ದು ಪಾವಾತಿಸಲು ಸಾಧ್ಯವಾಗುವುದಿಲ್ಲವೆಂದು ಸಭೆ ಗಮನಕ್ಕೆ ಪೌರಾಯುಕ್ತರು ವಿವರಣೆ ನೀಡಿದರು ನಂತರ ಸಭೆಯು ಚರ್ಚಿಸಿ ಸದಸ್ಯರಾದ ಶ್ರೀ ಶೇಷಾದ್ರಿಯವರು ಮಾತನಾಡಿ ಹಿರಿಯ ಸದಸ್ಯರುಗಳನ್ನೊಳಗೊಂಡತೆ ನಗರಸಭೆಯ ಎಲ್ಲಾ ಸದಸ್ಯರುಗಳು ಒಗ್ಗೂಡಿ ಮಾನ್ಯ ಮುಖ್ಯಮಂತ್ರಿಗಳನ್ನು ಸಂದರ್ಶಿಸಿ ಪ್ರಸ್ತುತ ವಸ್ತು ಸ್ಥಿತಿಯನ್ನು ವಿವರಿಸಿ ತಕ್ಷಣ ಭೂಸ್ವಾಧೀನದ ಬಾಬ್ತು ಪೂರ್ಣ ಪರಿಹಾರದ ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡುವಂತೆ ನಿವೇದಿಸಿಕೊಳ್ಳುವುದು ಸೂಕ್ತವೆಂದು ತಿಳಿಸಿದರು ನಂತರ ಸಭೆಯ ಶ್ರೀ ಶೇಷಾದ್ರಿಯವರ ಅಭಿಪ್ರಾಯವನ್ನು ಒಪ್ಪಿ ತೀರ್ಮಾನಿಸಿತು ಮುಂದಿನ ವಾರದಲ್ಲಿ ಈ ಕಾರ್ಯವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ವಿಷಯ 10:- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಚನ್ನಪಟ್ಟಣರವರ ಪತ್ರದ ಸಂಖ್ಯೆ ಕಜಮಂ/ಸಕಾಅ/ಚಾಪ/ಉಪವಿಭಾಗ/984/2005-06, ದಿ: 22.02.2006 ರಂತೆ ನೆಹರು ಪಾರ್ಕ್ ಆವರಣದಲ್ಲಿ 10.00 ಲಕ್ಷ ಲೀಟರ್ ಸಾಮಾರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಾಗಾರವನ್ನು ನಿರ್ಮಾಣ ಮಾಡಲು ಸ್ಥಳ ಕೋರಿರುವ ವಿಚಾರ.

ತಿರ್ಮಾನ 10:- ಸಾರ್ವಜನಿಕ ಹಿತದೃಷ್ಠಿಯಿಂದ ನೆಹರು ಪಾರ್ಕ್ ಆವರಣದಲ್ಲಿ ಹಾಲಿ ಇರುವ ಜಲಸಂಗ್ರಹಣ ಗಾರದ ಬಳಿ ಹೊಸದಾಗಿ 10.00 ಲಕ್ಷ ಲೀಟರ್ ಸಾಮಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರವನ್ನು ನಿರ್ಮಿಸಲು ನೀಡಿರುವ ಅನುಮತಿಯನ್ನು ಅನುಸಮರ್ಥನಗೊಳಿಸಲಾಯಿತು.

PDF Created with deskPDF PDF Writer - Trial :: http://www.docudesk.com

ವಿಷಯ 11:- ಮಾನ್ಯ ಸದಸ್ಯರಾದ ಶ್ರೀ.ನಾಗಣ್ಣರವರು ಹಾಗೂ ಇತರರು ಅರ್ಜಿ ನೀಡಿ ಹೊಸದಾಗಿ ಕೌನ್ಸಿಲ್ ಸಭಾಂಗಣವನ್ನು ನಗರಸಭಾ ಕಛೇರಿ ಆವರಣದಲ್ಲಿ ನಿರ್ಮಿಸಲು ನೀಡಿರುವ ಅರ್ಜಿಯ ವಿಚಾರ.

ತಿರ್ಮಾನ 11:- ಸದಸ್ಯರಾದ ಶ್ರೀ ನಾಗಣ್ಣನವರು ಪ್ರತ್ಯೇಕ ಮೀಟಿಂಗ್ ಹಾಲ್ ಅಗತ್ಯವಿರುವುದನ್ನು ಸಭೆ ಗಮನಕ್ಕೆ ವಿವರವಾಗಿ ಮಾಹಿತಿ ನೀಡಿದರು ನಂತರ ಪೌರಾಯುಕ್ತರು ಮಾತನಾಡಿ ಪ್ರಸ್ತುತ ರಾಜ್ಯದ ಆಯವ್ಯಯದಲ್ಲಿ ನಗರಸಭೆಗೆ ಒಂದು ನೂತನ ಕಛೇರಿಗಾಗಿ ಕಟ್ಟಡ ಮತ್ತು ಮೀಟಿಂಗ್ ಹಾಲಿಗಾಗಿ ರೂ. 140.00 ಲಕ್ಷಗಳನ್ನು ಕಾದಿರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ವಿವರಣೆ ನೀಡಿದರು. ಮುಂದುವರೆದು ಮಾತನಾಡಿ ಪ್ರಸ್ತುತ ನಗರಸಭೆ ಆಯವ್ಯಯದಲ್ಲಿ ರೂ. 18.00 ಲಕ್ಷ ಅಳವಡಿಸಿಕೊಳ್ಳಲಾಗಿದ್ದು ಉದ್ದೇಶಿಸಿರುವ ಮೀಟಿಂಗ್ ಹಾಲನ್ನು ಕಾಮಗಾರಿ ಪ್ರಾರಂಭಿಸಬಹುದೆಂದು ತಿಳಿಸಿದರು. ನಂತರ ಸಭೆಯು ಹೊಸ ಕಛೇರಿ ಕಟ್ಟಡ ಮತ್ತು ಮೀಟಿಂಗ್ ಹಾಲ್ ಅಗತ್ಯವಿರುವುದನ್ನು ಮನಗಂಡು ಕಟ್ಟಡಗಳ ನಿರ್ಮಾಣಕ್ಕೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 12:- 11 ನೇ ಹಣಕಾಸು ಯೋಜನೆಯಡಿಯಲ್ಲಿ ಅಡುಗೆ ಮನೆಗಳ ನಿರ್ಮಾಣಕ್ಕಾಗಿ ಈಗಾಗಲೇ ಟೆಂಡರ್ ಕರೆದಿದ್ದು ಕೋಡಿಪುರದ ಕೆಲಸ ಪ್ರಗತಿಯಲ್ಲಿದ್ದು ಹಾಲಿ ನಿರ್ಮಿಸುತ್ತಿರುವ ಅಡುಗೆ ಮನೆಯ ಅಳತೆಯು ಕಡಿಮೆ ಇದ್ದು ಸ್ಥಳಾವಕಾಶವಿರುವುದರಿಂದ ಅಳತೆಯನ್ನು ವಿಸ್ತರಿಸಿ ಅಡುಗೆ ಮನೆಯನ್ನು ನಿರ್ಮಿಸಿಕೊಡಲು ವಾರ್ಡಿನ ಸದಸ್ಯರಾದ ಶ್ರೀ.ಉಮೇಶ್ ರವರು ಅರ್ಜಿ ನೀಡಿದ್ದು ಸಂಬಂಧಿಸಿದ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ವಿಚಾರ.

ತಿರ್ಮಾನ 12. ಪರಿಸ್ಕೃತ ಅಂದಾಜು ರೂ. 52,000/- ಗಳಿಗೆ ಸಭೆಯು ಸರ್ವಾನುಮತದಿಂದ ಮಂಜೂರು ಮಾಡಿತು ಹೆಚ್ಚುವರಿ ಹಣವನ್ನು ನಗರಸಭಾ ನಿಧಿಯಿಂದ ಭರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 13:- ನಗರಸಭೆಗ ಸೇರಿದ ವಾರ್ಡ್.ನಂ.8 ರಲ್ಲಿ ಬರುವ ಆಕ್ಟ್ರಾಯ್ ಕಛೇರಿ ಹಿಂಭಾಗದ ಅಂಗಡಿ ಮಳಿಗೆಗಳನ್ನು ದುರಸ್ಥಿ ಪಡಿಸಲು ಬಾಡಿಗೆದಾರರಿಂದ ಬಂದಿರುವ ಅರ್ಜಿ ವಿಚಾರ.

ತಿರ್ಮಾನ 13:- ಸಭೆಯು ಕುಲಂಕುಷವಾಗಿ ಚರ್ಚಿಸಿತು. ಸದರಿ ಮಳಿಗೆಗಳು ನಗರದ ಮಧ್ಯಭಾಗದಲ್ಲಿರುವುದರಿಂದ ಸದರಿ ಮಳಿಗೆಗಳನ್ನು ಖುಲ್ಲಾ ಮಾಡಿಸಿ ಹೊಸದಾಗಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಾಣ ಮಾಡಿದಲ್ಲಿ ನಗರಸಭೆಗೆ ಒಳ್ಳೆಯ ಆದಾಯ ನಿರೀಕ್ಷಿಸಬಹುದೆಂದು ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಅಂದಾಜು ಮೊಬಲಗನ್ನು ಮುಂದೆ ಬಾಡಿಗೆಗೆ ಬರುವ ಬಾಡಿಗೆದಾರರಿಂದ ಠೇವಣಿ ಪಡೆಯಬಹುದೆಂದು ಶ್ರೀ ಎ.ವಿ.ಬಾಸ್ಕರ್ ಮತ್ತು ಶ್ರೀ ಉಮೇಶ್ ಅಭಿಪ್ರಾಯ ವ್ಯಕ್ತಪಡಿಸಿದರು ನಂತರ ಸಭೆಯು ಸರ್ವಾನುಮತದಿಂದ ಸದಸ್ಯರ ಅಭಿಪ್ರಾಯವನ್ನು ಒಪ್ಪಿ ಅಂಗೀಕರಿಸಿತು. ಪೂರ್ಣ ಅಂದಾಜು ಹಾಗು ವಿವರದೊಂದಿಗೆ ಮುಂದಿನ ಸಭೆಗೆ ತರಲು ಸೂಚಿಸಿ ತಿರ್ಮಾನಿಸಲಾಯ್ತು.

ವಿಷಯ 14:- ವಾರ್ಡ್.ನಂ.31 ರಲ್ಲಿ ಬರುವ ರಂಗರಾಯರ ದೊಡ್ಡಿಯ ಅಂಗನವಾಡಿಯ ಕೇಂದ್ರವನ್ನು ದುರಸ್ಥಿಪಡಿಸಿಕೊಡುವಂತೆ ಸದಸ್ಯರಾದ ಶ್ರೀ. ವೇದಮೂರ್ತಿರವರು ಕೋರಿರುವ ಅರ್ಜಿಯ ವಿಚಾರ.

ತಿರ್ಮಾನ 14:- ಪೌರಾಯುಕ್ತರು ಪ್ರಸ್ತುತ ಅಂಗನವಾಡಿಯ ಕಟ್ಟಡದ ವಸ್ತು ಸ್ಥಿತಿಯನ್ನು ಸಭೆ ಗಮನಕ್ಕೆ ತಂದರು. ನಂತರ ಸಭೆಯು ಸದರಿ ಕಟ್ಟಡದ ದುರಸ್ಥಿ ಮಾಡಿಸುವುದು ಅವಶ್ಯಕತೆ ಇರುವುದರಿಂದ ಅಂದಾಜನ್ನು ತಯಾರಿಸಿ ನಗರಸಭಾ ನಿಧಿಯಿಂದ ಮಾಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

PDF Created with deskPDF PDF Writer - Trial :: http://www.docudesk.com

ವಿಷಯ 15:– ವಾರ್ಡ್.ನಂ.7 ರಲ್ಲಿ ಬರುವ ಅಗ್ರಹಾರ ಬಡಾವಣೆಯ ಕೆ.ಆರ್.ಲಿಂಗರಾಜು ಮನೆಹತ್ತಿರ ಆರ್.ಸಿ.ಸಿ.ಡೆಕ್ ಸ್ಲಾಬ್ ನಿರ್ಮಾಣ ಮಾಡಿಕೊಡಲು ವಾರ್ಡಿನ ಸದಸ್ಯರಾದ ಶ್ರೀಮತಿ. ಧನಲಕ್ಷ್ಮೀರವರು ಕೋರಿರುವ ಅರ್ಜಿಯ ವಿಚಾರ.

ತಿರ್ಮಾನ 15:– ಕಾಮಗಾರಿ ನಿರ್ವಹಣೆ ಅಗತ್ಯವಿರುವುದರಿಂದ ರೂ. 25,000/– ಗಳ ಅಂದಾಜಿಗೆ ಮಂಜೂರು ಮಾಡಲಾಯಿತು. ಸದರಿ ಕಾಮಗಾರಿಯನ್ನು ನಗರಸಭಾ ನಿಧಿಯಿಂದ ಮಾಡಿಸಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 16:– 2006–07 ನೇ ಸಾಲಿಗೆ ಬೀದಿ ದೀಪ ನಿರ್ವಹಣೆಯಗಾಗಿ ಬಿಡಿ ಭಾಗಗಳ ಖರೀದಿಗಾಗಿ ಹಾಲಿ ಇರುವ 2005–06 ನೇ ಸಾಲಿನ ಟೆಂಡರ್‌ನ್ನು ಮುಂದುವರೆಸುವ ವಿಚಾರ.

ತಿರ್ಮಾನ 16:– ವಾರ್ಷಿಕ ಟೆಂಡರ್ ಮಂಜೂರಾಗಿ ಬರುವವರೆಗೆ 2005–06 ನೇ ಸಾಲಿಗೆ ಮಂಜೂರಾತಿಯಾಗಿರುವ ಫರ್ಮ ನವರಿಂದ ಬೀದಿ ದೀಪದ ಬಿಡಿಭಾಗಗಳನ್ನು ಖರೀದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 17:– ಚಂದನ–ವಂದನ ಸ್ವಸಹಾಯ ಸಂಘ,ರಾಮನಗರ ರವರು ಮನವಿ ಸಲ್ಲಿಸಿ ಅಂಬೇಡ್ಕರ್ ಭವನದ ಕೆಳಭಾಗದ ಕಟ್ಟಡದಲ್ಲಿ ಕಸೂತಿ ಕೇಂದ್ರ ಪ್ರಾರಂಭಿಸಲು ಕಡಿಮೆ ದರದಲ್ಲಿ ಐದು ವರ್ಷಗಳ ಅವಧಿಗೆ ಬಾಡಿಗೆ ಅಥವಾ ಬೋಗ್ಯಕ್ಕೆ ಕೋರಿರುವ ವಿಚಾರ.

ತಿರ್ಮಾನ 17:– ವಿಷಯದ ಬಗ್ಗೆ ಸಭೆಯು ಚರ್ಚಿಸಿತು. ಕಸೂತಿ ಕೇಂದ್ರ ಪ್ರಾರಂಭಿಸಲು ಅಂಬೇಡ್ಕರ್ ಸಾಂಸ್ಕೃತಿಕಭವನ ಕೊಡಲು ಬರುವುದಿಲ್ಲವೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 18:– ಕಾರ್ಯದರ್ಶಿಗಳು, ಅರ್ಕಾವತಿ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘ, ರಾಮನಗರ ರವರು ಮನವಿ ಸಲ್ಲಿಸಿ ನಿವೇಶನ ಕೋರಿರುವ ವಿಚಾರ.

ತಿರ್ಮಾನ 18:– ವಿಷಯದ ಬಗ್ಗೆ ಶ್ರೀ ಉಮೇಶ್‌ರವರು ಮಾತನಾಡಿ ರಾಮನಗರ ತಾಲ್ಲೋಕಿನಲ್ಲಿ ಸುಮಾರು 3,000 ಸಾವಿರ ಅಂಗವಿಕಲರಿದ್ದು ಇವರ ಮನವಿಯನ್ನು ಪುರಸ್ಕರಿಸಿ ವಾರ್ಡ್ 25 ರ ಮಂಜುನಾಥನಗರದಲ್ಲಿರುವ ಸರ್ಕಾರಿ ಶಾಲೆ ಪಕ್ಕ ಇರುವ ಖಾಲಿ ನಿವೇಶನ 30' X 50' ನಿವೇಶನವನ್ನು ಮಂಜೂರುಮಾಡಲು ತಮ್ಮ ಅಭಿಪ್ರಾಯ ತಿಳಿಸಿದರು ನಂತರ ಶ್ರೀ ಶೇಷಾದ್ರಿಯವರು ಮಾತನಾಡಿ ಮುಂದೆ ಆಶ್ರಯ ಯೋಜನೆಯಡಿ ನಿವೇಶನಗಳನ್ನು ವಿತರಿಸುವ ಸಂಧರ್ಭಗಳಲ್ಲಿ ಇವರ ಮನವಿಯನ್ನು ಪರಿಗಣಿಸಿ 100' X 100' ನಿವೇಶನವನ್ನು ನೀಡಿದಲ್ಲಿ ಸದರಿ ಸಂಸ್ಥೆಗೆ ಅನುಕೂಲವಾಗುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ಶ್ರೀ ನಾಗಣ್ಣನವರು ಮಾತನಾಡಿ ನಗರವು ಬೆಳೆಯುತ್ತಿರುವುದರಿಂದ ಶಾಲೆ ಬಳಿಯಿರುವ ನಿವೇಶನವನ್ನು ಮುಂದೆ ಶಾಲೆಯ ಅಭಿವೃದ್ಧಿಗೆ ಅಗತ್ಯವಿರುವುದರಿಂದ ಸದರಿ ನಿವೇಶನವನ್ನು ಶಾಲೆಗೆ ಉಳಿಸುವುದು ಸೂಕ್ತವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಸಭೆಯು ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘಕ್ಕೆ ನಿವೇಶನವನ್ನು ನೀಡುವ ಬಗ್ಗೆ ಮುಂದಿನ ಸಭೆಗೆ ತರುವಂತೆ ಸೂಚಿಸಿ ತಿರ್ಮಾನಿಸಲಾಯಿತು.

ವಿಷಯ 19:– ಐ.ಡಿ.ಎಸ್.ಎಂ.ಟಿ. ಕಾಂಪ್ಲೆಕ್ಸ್‌ನಲ್ಲಿ ಮಳಿಗೆ ಸಂಖ್ಯೆ 6 ರ ಬಗ್ಗೆ ಶ್ರೀ. ಚೇತನ್ ಪ್ರಕಾಶ್ ಬಿನ್ ಲೇ॥ ಹರಬನಾಮ ದಾಸ್ ರವರ ಮನವಿ ವಿಚಾರ.

ತಿರ್ಮಾನ 19:– ವಿಷಯವನ್ನು ಪರಿಶೀಲಿಸಲಾಯ್ತು. ಅರ್ಜಿದಾರರು ಈ ಹಿಂದೆ ಕಾಂಪ್ಲೆಕ್ಸ್ ಮುಂಭಾಗ ನಗರಸಭೆಯ ಅನುಮತಿ ಪಡೆದು ಹಂಗಾಮಿ ಮಳಿಗೆ ನಿರ್ಮಿಸಿ ವ್ಯಾಪಾರ ಮಾಡುತ್ತಿದ್ದರು. ಮಳಿಗೆ ಕಟ್ಟಿದ ನಂತರ ಅವರಿಗೆ ಒಂದು ಮಳಿಗೆ ಕೊಡುವ ಉದ್ದೇಶದಿಂದ 50,000 ರೂ.ಗಳನ್ನು ಪಡೆಯಲಾಗಿತ್ತು. ಈಗ ಅವರು ಹರಾಜಿನಲ್ಲಿ ಭಾಗವಹಿಸಿ ಅಂಗಡಿ ಪಡೆದಿರುವುದರಿಂದ ಹಾಗು ಅವರ ಹರಾಜು ಅನುಮೋದನೆಯಾಗಿರುವುದರಿಂದ ಈ ಹಿಂದೆ ನಗರಸಭೆಗೆ ಕಟ್ಟಿದ್ದ 50,000 ರೂ.ಗಳನ್ನು ಹೊಂದಾಣಿಕೆ ಮಾಡಿಕೊಂಡು ಅಂಗಡಿ

PDF Created with deskPDF PDF Writer - Trial :: http://www.docudesk.com

ಕೊಡಬಹುದೆಂದು ಸರ್ವಾನುಮತದಿಂದ ತಿರ್ಮಾನಿಸಲಾಯಿತು ಹಾಗು ಈ ಹಿಂದೆ ಮಳಿಗೆ ನಂ. 42 ನ್ನು ಪಡೆದಿದ್ದ ಶ್ರೀ.ನಾಗರಾಜುರವರು ಕಟ್ಟಿದ್ದ 50,000/- ರೂಗಳನ್ನು ಹೊಸದಾಗಿ ಹರಾಜು ನಿಂತ ಅಂಗಡಿಗೆ ಹೊಂದಾಣಿಕೆ ಮಾಡಬಹುದೆಂದು ತೀರ್ಮಾನಿಸಲಾಯಿತು.

ವಿಷಯ 20:- 2003-04 ನೇ ಸಾಲಿನ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 19.50 ಲಕ್ಷ ರೂಗಳು ಬಿಡುಗಡೆಯಾಗಿದ್ದು ಟೆಂಡರ್ ಕರೆದು ಕಾಮಗಾರಿ ನಿರ್ವಹಿಸಲಾಗಿದೆ. ಎಸ್.ಆರ್.ದರಕ್ಕಿಂತ ಹೆಚ್ಚಿನ ದರಕ್ಕೆ ಟೆಂಡರ್ ಅನುಮೋದನೆಯಾಗಿರುವುದರಿಂದ ರೂ. 1,02,365/- ಗಳ ಹೆಚ್ಚುವರಿ ಬಿಡ್‌ನ್ನು ನಗರಸಭಾ ನಿಧಿಯಿಂದ ಭರಿಸಲು ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 20:- ಕಡತಗಳನ್ನು ಪರಿಶೀಲಿಸಲಾಯಿತು. ಎಸ್.ಆರ್.ದರಕ್ಕಿಂತ ಹೆಚ್ಚುವರಿ ದರಕ್ಕೆ ಟೆಂಡರ್ ಅನುಮೋದಿಸಿರುವುದರಿಂದ ಹೆಚ್ಚುವರಿ ಮೊಬಲಗು ರೂ. 1,02,365/- ಗಳನ್ನು ನಗರಸಭಾ ನಿಧಿಯಿಂದ ಪಾವತಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 21:- 2006-07 ನೇ ಸಾಲಿಗೆ ನಗರಸಭೆಗೆ ಅವಶ್ಯ ಮುದ್ರಣ ಸಾಮಾಗ್ರಿ ಮುದ್ರಿಸಿ ಸರಬರಾಜು ಮಾಡಲು ದಿ: 12.04.2006 ಕ್ಕೆ ಆಹ್ವಾನಿಸಿರುವ ಟೆಂಡರ್‌ನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

ತಿರ್ಮಾನ 21:- ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಯಿತು. ಕಡಿಮೆ ದರ ನಮೂಧಿಸಿರುವ ಟೆಂಡರ್‌ದಾರರಾದ ಶ್ರೀ ಮಹೇಶ್ ಪ್ರಿಂಟರ್ಸ್, ರಾಮನಗರ ಇವರ ದರವನ್ನು 2006-07 ನೇ ಸಾಲಿಗೆ ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 22:- 2006-07 ನೇ ಸಾಲಿಗೆ ನೈರ್ಮಲ್ಯ ವಿಭಾಗಕ್ಕೆ ಅಗತ್ಯವಿರುವ ಕ್ರಿಮಿನಾಶಕಗಳ ಖರೀದಿಗಾಗಿ ಟೆಂಡರ್ ಕರೆದಿದ್ದು ದಿ: 12.04.2006 ಕ್ಕೆ ಆಹ್ವಾನಿಸಿರುವ ಟೆಂಡರ್‌ನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

ತಿರ್ಮಾನ 22. 2006-07 ನೇ ಸಾಲಿಗೆ ಕೆಮಿಕಲ್ಸ್ ಸರಬರಾಜಿಗಾಗಿ ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಯಿತು. ಟೆಂಡರ್ ಷೆಡ್ಯೂಲ್ ಕ್ರ.ಸಂ. 1,2,3 ಮತ್ತು 6 ಕ್ಕೆ ಮೈಸೂರ್ ಕೆಮಿಕಲ್ಸ್ ಅಂಡ್ ಮಾರ್ಕೆಟಿಂಗ್, ಕುಣಿಗಲ್ ಇವರು ಇತರೆ ಟೆಂಡರ್‌ದಾರರಿಗಿಂತ ಕಡಿಮೆ ದರ ನಮೂದಿಸಿದ್ದು ಮಲೇರಿಯಾ ಆಯಿಲ್ ಮತ್ತು ಪೈರೋಸಿನ್ ಆಯಿಲ್‌ಗೆ ಜನತಾ ಸೇಲ್ಸ್ ಮೈಸೂರು ಇವರು ನಮೂದಿಸಿರುವ ದರವು ಇತರೆ ಟೆಂಡರ್‌ದಾರರಗಿಂತ ಕಡಿಮೆ ದರ ನಮೂದಿಸಿರುವುದರಿಂದ ಇವರ ಟೆಂಡರ್‌ಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯ 23:-2006-07 ನೇ ಸಾಲಿನ ಕಛೇರಿ ಸ್ಟೇಷನರಿ ಸರಬರಾಜಿಗಾಗಿ ಟೆಂಡರ್ ಆಹ್ವಾನಿಸಿದ್ದು ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

ತಿರ್ಮಾನ 23. 2006-07ನೇ ಸಾಲಿಗೆ ಕಛೇರಿಗೆ ಸ್ಟೇಷನರಿ ಸರಬರಾಜಿಗಾಗಿ ಬಂದಿರುವ ಟೆಂಡರ್‌ಗಳ ಪೈಕಿ ಬಾಲಾಜಿ ಟ್ರೇಡರ್ಸ್, ರಾಮನಗರ ಇವರು ಇತರೆ ಟೆಂಡರ್‌ದಾರರಿಗಿಂದ ಕಡಿಮೆ ದರ ನಮೂದಿಸಿದ್ದು ಇವರ ಟೆಂಡರನ್ನು ಅನುಮೋದಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾಸಿದೆ.

ವಿಷಯ 24:- ವಿಶೇಷ ಭೂ ಸ್ವಾದೀನ ಅಧಿಕಾರಿಗಳ ಕಛೇರಿ ರಾಮನಗರರವರ ಪತ್ರದ ಸಂಖ್ಯೆ ಎಲ್.ಐ.ಸಿ./ಆರ್.ಹೆಚ್.ಎಸ್/01/1996-97, ದಿ: 22.03.2006 ರಂತೆ ವಡೇರಹಳ್ಳಿ ಗ್ರಾಮದ ಸರ್ವೆ.ನಂ. 75 ರಲ್ಲಿ 7 ಎಕರೆ 25 ಗುಂಟೆ ಜಮೀನನ್ನು ನಿವೇಶನ ಹಂಚಲು ಭೂಸ್ವಾದೀನ ಪಡಿಸಿಕೊಂಡಿದ್ದು ನ್ಯಾಯಾಲಯದ ಆದೇಶದಂತೆ ಹೆಚ್ಚುವರಿ ಪರಿಹಾರ ಹಣ ರೂ.17,72,656/- ಗಳನ್ನು ಪಾವತಿಸಲು ಕೋರಿರುವ ವಿಚಾರ.

PDF Created with deskPDF PDF Writer - Trial :: http://www.docudesk.com

ತಿರ್ಮಾನ 24. ಈ ಸಂಬಂಧ ತೀರ್ಮಾನ 9 ರಲ್ಲಿ ತೀರ್ಮಾನಿಸಿರುವಂತೆ ಕ್ರಮವಹಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 25:- ನಗರಸಭೆ ವಾಹನ ಸಂಖ್ಯೆ ಕೆ.ಎ.05/677 ದುರಸ್ಥಿ ಮಾಡಲು ಬಂದಿರುವ ಕೊಟೇಷನ್‌ಗಳನ್ನು ಅನುಮೋದಿಸುವ ವಿಚಾರ.

ತಿರ್ಮಾನ 25. ಡಿ.ಸಿ.ಎಂ ಟಯೋಟ ಲಾರಿ ದುರಸ್ಥಿಪಡಿಸಿ ಜೆಟಿಂಗ್ ಯಂತ್ರ ಅಳವಡಿಸಲು ಬಂದಿರುವ ಟೆಂಡರ್‌ಗಳನ್ನು ಪೌರಾಯುಕ್ತರು ಸಭೆ ಗಮನಕ್ಕೆ ವಿವರಿಸಿದರು. ಇತರೆ ಟೆಂಡರ್‌ದಾರರಿಗಿಂತ ಅಲೈಡ್ ಮೋಟಾರ್ಸ್ ಬೆಂಗಳೂರು ಇವರು ಕಡಿಮೆ ದರ ನಮೂದಿಸಿದ್ದು ಇವರ ಟೆಂಡರ್ ದರ ರೂ. 2,92,910/-ನ್ನು ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿ ಅಧಿಕೃತ ಜ್ಞಾಪನ ಎಂ.ಯು.ಎನ್./ಸಿ.ಆರ್/ 372/2005-06 ದಿನಾಂಕ: 28-3-2006 ರಲ್ಲಿ ಮಂಜೂರು ಮಾಡಿರುವಂತೆ ಒಪ್ಪಿ ಮಂಜೂರು ಮಾಡಲಾಯಿತು. ಇದಕ್ಕೆ ತಗಲುವ ವೆಚ್ಚವನ್ನು ಎಸ್.ಡಬ್ಲ್ಯೂ.ಎಂ ಅಡಿ ಬಿಡುಗಡೆಯಾಗಿರುವ ರೂ. 10.00 ಲಕ್ಷ (ಜೆಟಿಂಗ್ ಯಂತ್ರ ಖರೀದಿಸಿ ಉಳಿಯುವ) ಅನುದಾನದಲ್ಲಿ ಮಾಡಿಸುವುದೆಂದು ಹೆಚ್ಚುವರಿ ಮೊಬಗಲನ್ನು ನಗರಸಭಾ ನಿಧಿಯಿಂದ ಬರಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿತು.

ವಿಷಯ 26(1):- 2005-06ನೇ ಸಾಲಿಗೆ ಶೇ% 18 ರ ಯೋಜನೆಯಡಿ ಮಂಜೂರಾಗಿರುವ (1)ಹೋಲಿಗೆ ಯಂತ್ರ ನೀಡುವುದು (2) ಟ್ರೈಸಿಕಲ್ ನೀಡುವುದು (3) ಸೂರಿಗಾಗಿ ಜಿಂಕ್ ಶೀಟ್ ನೀಡುವುದು ಈ ಬಾಬಿಗಾಗಿ ಟೆಂಡರ್ ಕರೆಯಲಾಗಿದ್ದು ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಿ ಅನುಮೋದನೆ ನೀಡುವ ವಿಚಾರ.

ತೀರ್ಮಾನ 26(1):-(1).ಹೊಲಿಗೆ ಯಂತ್ರ:- ಹೊಲಿಗೆ ಯಂತ್ರ ಸರಬರಾಜಿಗಾಗಿ 2 ಟೆಂಡರ್‌ಗಳು ಬಂದಿದ್ದು 2 ಟೆಂಡರ್‌ಗಳ ಪೈಕಿ ಬಾಲಾಜಿ ಎಲೆಕ್ಟ್ರಾನಿಕ್ಸ್, ರಾಮನಗರ ಇವರು ಇತರೆ ಟೆಂಡರ್‌ದಾರರಿಗಿಂತ ಕಡಿಮೆ ದರ ನಮೂದಿಸಿದ್ದು (ಐ.ಎಸ್.ಐ ಮಾರ್ಕ್‌ವುಳ್ಳ (ORTEM) ಒಂದು ಹೊಲಿಗೆ ಯಂತ್ರಕ್ಕೆ 3,450/- ನಮೂದಿಸಿದ್ದು ಇವರ ಟೆಂಡರ್‌ನ್ನು ಅನುಮೋದಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಈ ಬಾಬಿಗೆ ಕಾದಿರಿಸಿರಲಾಗಿರುವ 90,000/- ಗಳಿಗೆ 26 ಹೊಲಿಗೆ ಯಂತ್ರಗಳನ್ನು ಖರೀದಿಸಿರುವುದೆಂದು ಹೆಚ್ಚುವರಿ ಮೊಬಲಗನ್ನು ನಗರಸಭೆ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.

ಮುಂದುವರೆಯುತ್ತಾ 2004-05ನೇ ಸಾಲಿಗೆ ಹೊಲಿಗೆ ಯಂತ್ರ ಖರೀದಿಗಾಗಿ ರೂ. 1.00 ಲಕ್ಷಗಳನ್ನು ಕಾದಿರಿಸಿಕೊಂಡಿದ್ದು ಹೊಲಿಗೆ ಯಂತ್ರದ ಸರಬರಾಜಿಗಾಗಿ ಮೈಸೂರು ಸಿವಿಂಗ್ಸ್ ಮಿಷನ್ ಕಂಪನಿ ಬೆಂಗಳೂರು ಇವರು ಮೇಲ್ಕಂಡ ಕಂಪನಿಯ ಹೊಲಿಗೆ ಯಂತ್ರಕ್ಕೆ ರೂ. 3,650/- ಗಳಿಗೆ ದರ ನಮೂದಿಸಿದ್ದು ಠರಾವು ಸಂಖ್ಯೆ ದಿನಾಂಕ ರಲ್ಲಿ ಈ ಟೆಂಡರ್‌ನ್ನು ಅನುಮೋದಿಸಿದ್ದು ಬೆಲೆ ಜಾಸ್ತಿಯಾದ ಕಾರಣ ಈ ವರೆಗೆ ಖರೀದಿಸಿಲ್ಲಾವಾದ್ದರಿಂದ ಮೈಸೂರು ಸಿವಿಂಗ್ಸ್ ಮಿಷನ್ ಕಂಪನಿ, ಬೆಂಗಳೂರುರವರ ಟೆಂಡರ್‌ನ್ನು ರದ್ದುಪಡಿಸಿ ಒಂದು ಯಂತ್ರಕ್ಕೆ ರೂ. 200/- ಉಳಿತಾಯವಾಗುವುದರಿಂದ ಬಾಲಾಜಿ ಎಲೆಕ್ಟ್ರಾನಿಕ್ಸ್ ಇವರಿಂದ ಖರೀದಿಸಲು ಸರ್ವಾನುಮತದಿಂದ ಸಭೆ ತೀರ್ಮಾನಿಸಿತು.

(2). ಟ್ರೈಸಿಕಲ್:- ಟ್ರೈಸಿಕಲ್ ಸರಬರಾಜಿಗಾಗಿ 2 ಟೆಂಡರ್‌ಗಳು ಬಂದಿದ್ದು 2 ಟೆಂಡರ್‌ಗಳ ಪೈಕಿ ನಿಮಿಷಾಂಭ ಎಂಟರ್‌ಪ್ರೈಸಸ್ಸ್ ರಾಮನಗರ ಇವರು ಇತರೆ ಟೆಂಡರ್‌ದಾರರಿಗಿಂತ ಕಡಿಮೆ ದರ ನಮೂದಿಸಿದ್ದು (ಐ.ಎಸ್.ಐ ಮಾರ್ಕ್‌ವುಳ್ಳ ಒಂದು ಟ್ರೈಸಿಕಲ್‌ಗೆ ರೂ. 4,150/- ನಮೂದಿಸಿದ್ದು ಇವರ ಟೆಂಡರ್‌ನ್ನು ಅನುಮೋದಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಈ ಬಾಬಿಗೆ ಕಾದಿರಿಸಿರಲಾಗಿರುವ 25,000/- ಗಳಿಗೆ 6 ಟ್ರೈಸಿಕಲ್‌ಗಳನ್ನು ಖರೀದಿಸಿರುವುದೆಂದು ಹೆಚ್ಚುವರಿ ಮೊಬಲಗನ್ನು ನಗರಸಭೆ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.

PDF Created with deskPDF PDF Writer - Trial :: http://www.docudesk.com

(3). ಜೆಂಕ್ ಶೀಟ್ :- ಜೆಂಕ್ ಶೀಟ್ ಸರಬರಾಜಿಗಾಗಿ 3 ಟೆಂಡರ್‌ಗಳು ಬಂದಿದ್ದು 3 ಟೆಂಡರ್‌ಗಳ ಪೈಕಿ ಎಸ್.ಆರ್.ಹಾರ್ಡ್‌ವೇರ್ ಅಂಡ್ ಪೇಂಟ್ಸ್ ರಾಮನಗರ ಇವರು ಇತರೆ ಟೆಂಡರ್‌ದಾರರಿಗಿಂತ ಕಡಿಮೆ ದರ ನಮೂದಿಸಿದ್ದು (ಐ.ಎಸ್.ಐ ಮಾರ್ಕ್‌ವುಳ್ಳ ಒಂದು ಶೀಟ್‌ಗೆ ಗೆ ರೂ. 680/- ನಮೂದಿಸಿದ್ದು ಇವರ ಟೆಂಡರ್‌ನ್ನು ಅನುಮೋದಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಈ ಬಾಬಿಗೆ ಕಾದಿರಿಸಿರಲಾಗಿರುವ 50,000/- ಗಳಿಗೆ 75, 2 3/4 ಅಡಿ ಅಗಲದ 10 ಅಡಿ ಉದ್ದದ 0.7 ಎಂಎಂ ಗಾತ್ರದ ಐ.ಎಸ್.ಐ ಮಾರ್ಕಿನ ಟಾಟಾ ಶೀಟ್ಸ್‌ಗಳನ್ನು ಖರೀದಿಸಿರುವುದೆಂದು ಹೆಚ್ಚುವರಿ ಮೊಬಲಗನ್ನು ನಗರಸಭೆ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.

ವಿಷಯ 26(2):- ದಿ: 18.03.2006 ರಂದು ನಡೆಸಿದ ಅನುಪಯುಕ್ತ ಸಾಮಾಗ್ರಿಗಳ ಬಹಿರಂಗ ಹರಾಜು ನಡೆಸಿದ್ದು ಅಂತಿಮ ಬಿಡ್ದು ರೂ. 1,63,000/- ಗಳಿಗೆ ನಿಂತಿರುವುದನ್ನು ಅಂಗೀಕರಿಸಿ ಸ್ಥಿರಿಕರಿಸುವ ವಿಚಾರ.

ತೀರ್ಮಾನ 26(2):- ದಿ: 18.03.2006 ರಂದು ನಡೆದ ಅನುಪಯುಕ್ತ ಸಾಮಾಗ್ರಿ ಬಹಿರಂಗ ಹರಾಜು ಅಂತಿಮ ಬಿಡ್ದು ರೂ. 1,63,000/- ಗಳಿಗೆ ಸಭೆಯು ಒಪ್ಪಿ ಸ್ಥಿರಿಕರಿಸಿತು.

-ಸಹಿ-
ಅಧ್ಯಕ್ಷರು
ನಗರಸಭೆ, ರಾಮನಗರ

"ನಕಲು"

ಪೌರಾಯುಕ್ತರು
ನಗರಸಭೆ, ರಾಮನಗರ

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com